# "ಶ್ರೀ ಜಗನ್ನಾಥದಾಸರು – ಶ್ರೀ ಪ್ರಸನ್ನವೆಂಕಟದಾಸರಿಗೆ ಒಲಿದು ಬಂದ – ಸಾಣೆಗಿರಿ ಪ್ರಾಣನಾಥನನ್ನು ಸ್ತುತಿಸಿ ರಚಿಸಿತ ಕೃತಿ" – "ಶ್ರೀ ಸಾಣೆಗಿರಿಯ ಪ್ರಾಣನಾಥ ... ಕಾಖಂಡಿ ಪ್ರಸನ್ನ ವೆಂಕಟಾರ್ಯರ ಅಖಂಡ ಸೇವೆಗೆ ಒಲಿದು ಬಂದ ಪ್ರಾಣನಾಥಾ – ಒಳನೋಟ" –

**ಡಾ. ಸುಭಾಸ ಕಾಖಂಡಕಿ – ದೂ. 9448011954**

ಇದು ಶ್ರೀ ಜಗನ್ನಾಥದಾಸರು ಸಾಣೆಗಿರಿಯ ಪ್ರಾಣನಾಥನ ಮೇಲೆ ರಚಿಸಿದ ಕೃತಿಯಾದರೂ ಇದು ಅವರು ಶ್ರೀ ಪ್ರಸನ್ನವೆಂಕಟದಾಸರ ಆಧ್ಯಾತ್ಮಿಕ ಸಾಧನೆಯ ವೈಶಿಷ್ಟತೆಯನ್ನು ಉಲ್ಲೇಖಿಸಿದ ಐತಿಹಾಸಿಕ ಕೃತಿಯಾಗಿದೆ. ಈ ಕೃತಿಯ ಹಸ್ತ ಪ್ರತಿಯನ್ನು ಇತ್ತೀಚಿನ ವರ್ಷಗಳಲ್ಲಿ ಶ್ರೀ ಲಕ್ಷ್ಮೀಕಾಂತ ಪಾಟೀಲ ಅವರು ಶ್ರೀ ಜಗನ್ನಾಥದಾಸರ ಕೊನೆಯ ಶಿಷ್ಯರಾದ ತಾತೇದಾಸರ ಸಂಗ್ರಹದಲ್ಲಿ ಶೋಧನೆ ಮಾಡಿ ನಮಗೆ ಒದಗಿಸಿಕೊಟ್ಟಿದ್ದಾರೆ. ಇದನ್ನು ನಮ್ಮ ಶ್ರೀ ಪ್ರಸನ್ನವೆಂಕಟದಾಸರ ಸಮಗ್ರ ಕೃತಿಗಳ ಸಂಪುಟ–೨ ರಲ್ಲಿ ದಾಸರ ಹಸ್ತಪ್ರತಿ ಸಮೇತವಾಗಿ ಪ್ರಕಟಿಸಿದ್ದೇವೆ.

ಈ ಕೀರ್ತನೆಯ ಹಸ್ತಪ್ರತಿಯ ಜೊತೆಗೆ ಶ್ರೀ ಪ್ರಸನ್ನವೆಂಕಟದಾಸರು ಸಾಣೆಗಿರಿ ಪ್ರಾಣದೇವರನ್ನು ಪ್ರತಿಷ್ಠಾಪಿಸಿದ ಬಗ್ಗೆ ಐತಿಹಾಸಿಕ ವಿವರ ಹಾಗೂ ಸಾಣೆಗಿರಿ ಕ್ಷೇತ್ರದ ಮಹಿಮೆಯನ್ನು ಶ್ರೀ ಜಗನ್ನಾಥದಾಸರು ಮುಂಕಂಜಿ ಸರದಾರ ನಾರಾಯಣ ರಾಯರಿಗೆ ವಿವರಸಿದ ದಾಖಲೆಯ ತಾಳೆಗರಿಯ ಹಸ್ತಪ್ರತಿಯೂ ದೊರಕಿದೆ. ಈ ಹಸ್ತಪ್ರತಿಯಲ್ಲಿ ಉಲ್ಲೇಖಿಸಿದ ಸಾರಾಂಶ ಈ ರೀತಿಯಾಗಿದೆ. "ಸುಮಾರು ಕ್ರಿ.ಶ. ೧೮೦೫ರಲ್ಲಿ ಶ್ರೀ ಜಗನ್ನಾಥ ದಾಸರು ಸಾಣೆಗಿರಿ ಪ್ರಾಣನಾಥನ ಪೂಜಾ ಕೈಂಕರ್ಯ ಮಾಡುತ್ತಾ ಕುಳಿತಾಗ, ದಕ್ಷಿಣ ಭಾರತದ ದಂಡಾಧಿಕಾರಿಯಾದ ಕರ್ನಲ್ ಮೆಕೆಂಝಿ ಎನ್ನುವವರು ಸಂಸ್ಥಾನಿಕರಾದ ನಾರಾಯಣರಾಯ ಅವರ ಜೊತೆಗೆ ಅಲ್ಲಿಗೆ ಬರುತ್ತಾರೆ. ಆಗ ಅವರು ಜಗನ್ನಾಥದಾಸರ ಪಾದಗಳಿಗೆ ನಮಸ್ಕರಿಸಿ, ನೂರಾರು ಜನ ಈ ಕಾಡಿನಲ್ಲಿ ಏನು ಮಾಡುತ್ತಿರುವಿರಿ ಎಂದು ಕೇಳಿದಾಗ, ಶ್ರೀ ಜಗನ್ನಾಥದಾಸರು ಈ ಕ್ಷೇತ್ರದ ಮಹಿಮೆಯನ್ನು ಹೇಳುತ್ತೇನೆ ಕುಳಿತುಕೊಳ್ಳಿರಿ ಎಂದು ಹೇಳಿದಾಗ ಅವರು ನೂರು ಮಂದಿಯ ಜೊತೆಗೆ ಕುಳಿತುಕೊಳ್ಳುತ್ತಾರೆ. ಆಗ ಕ್ಷೇತ್ರದ ಮಹಿಮೆಯನ್ನು ಹೇಳುತ್ತಾರೆ. ಇದು ಅಂತಿಂಥ

ಪ್ರಾಣದೇವರ ಕ್ಷೇತ್ರವಲ್ಲ. ಶ್ರೀ ಪ್ರಸನ್ನವೆಂಕಟದಾಸರು ಪ್ರತಿಷ್ಠಾಪನೆ ಮಾಡಿ, ಪ್ರಾಣದೇವರನ್ನು ಪೂಜಿಸಿ ಸ್ವತಃ ಒಲಿಸಿಕೊಂಡಂಥಾ ಪ್ರಾಣದೇವರು" ಎಂದು ಹೇಳುತ್ತಾ ಶ್ರೀ ಜಗನ್ನಾಥದಾಸರು ಸಾಣೆಗಿರಿ ಪ್ರಾಣನಾಥನ ಮೇಲೆ ಕೀರ್ತನೆ ರಚಿಸಿ ಈ ಪ್ರಸಂಗವನ್ನು ಕೀರ್ತನೆಯಲ್ಲಿ ದಾಖಲಿಸಿದ್ದಾರೆ. ಇದೊಂದು ಅಪೂರ್ವವಾದ, ವಿಶಿಷ್ಠವಾದ ಕೃತಿ.

**ಸಾಣೆಗಿರಿಯಾ ಪ್ರಾಣನಾಥಾ ಎನ್ನಾ**
**ಸಾಣೆಗಿರಿಯಾ ಪ್ರಾಣನಾಥ** ॥ ಪ ॥
**ಮಾಣದೆ ಪೊರೆಯಾ ಶ್ರೀಹರಿ ದೂತಾ** ॥ ಅ.ಪ. ॥

**ಕಾಖಂಡಿ ಪ್ರಸನ್ನವೆಂಕಟಾರ್ಯರ**
**ಅಖಂಡ ಸೇವೆಗೆ ವಲಿದು ಬಂದ ॥**
**ವೈಕುಂಠನಾಮಕ ಶ್ರೀಕಾಂತನ ಗುಣ**
**ಸಾಕೆನಿಪರ್ಯ್ಯಂಕ ಬೋಧಿಪುರುಜುಗಣ** ॥ ೧ ॥

ಇಲ್ಲಿ ಶ್ರೀ ಜಗನ್ನಾಥದಾಸರು ಪ್ರಾಣದೇವರನ್ನು ಸ್ತುತಿಸುತ್ತ ಹೇಳುತ್ತಾರೆ "ಸ್ವಾಮಿ, ನೀನು ಅಂತಿಂಥವನಲ್ಲ. ಭಕ್ತರ ಅಂತರ್ಗತನಾಗಿ ಪೊರೆಯುವಂತೆ, ಅವರ ಸದಾನಿಷ್ಠೆ ಸೇವೆಗೆ ಒಲಿಯುವಂತೆ, ಶ್ರೀ ಪ್ರಸನ್ನವೆಂಕಟದಾಸರ ಅಖಂಡ ಸೇವೆಗೆ ಒಲಿದು ಬಂದ ಮಹಾಮಹಿಮ ನೀನು. ವೈಕುಂಠವಾಸಿಯಾದ ಶ್ರೀಕಾಂತನನ್ನು, ಅವನ ಮಹಿಮೆಯನ್ನು ತೃಪ್ತಿಯಾಗುವ ತನಕ ಕೊಂಡಾಡುವಂಥ ಹರಿತತ್ಪರ ಸೇವಾ ನಿರತ ನೀನು" ಎಂದು ಸ್ತುತಿಸಿದ್ದಾರೆ.

ಇದರ ಹಿಂದೆ ಆಂಜನೇಯನ ಕೀರ್ತಿಯನ್ನು ಹೊಗಳುವುದಲ್ಲಿದೆ. ದಾಸರ ಅಖಂಡ ಸೇವೆಯ ನಿಷ್ಠೆಯನ್ನು ಹಾಡಿ ಹೊಗಳಿದ್ದಾರೆ. ಇನ್ನು ಮುಂದಿನ ನುಡಿಯಲ್ಲಿ:

**ಅಂಜನೀತನಯ ಧನಂಜಯನಗ್ರಜ**
**ಕುಂಜಾರುಗಿರಿಸುಪಾಜಕಂಗಜಾ ॥**
**ಭಂಜಿಸಿದಿ ಜಗದೆಂಜಲ ಮತಗಳ**
**ಕುಂಜನಾಭಿಪ್ರೀಯ ಪ್ರಭಂಜನರೇಯಾ** ॥ ೨ ॥



ಇಲ್ಲಿ, ಅಂಜನಾದೇವಿಯ ಗರ್ಭಸಂಭವ, ಇನ್ನೊಂದು ಅವತರಾದಲ್ಲಿ ಅರ್ಜುನನ ಅನುಜ, ಅದರ ಮುಂದಿನ ಅವತಾರದಲ್ಲಿ ಪಾಜಕ ಕ್ಷೇತ್ರದಲ್ಲಿ ಜನಿಸಿ, ಜಗತ್ತಿನಲ್ಲಿ ಕಲಸುಮೇಲೋಗರವಾಗಿ ಹತ್ತಾರು ಪಂಡಿತರಿಂದ ಎಂಜಲುಗೊಂಡ ಅಂದರೆ ಅಪಭ್ರಂಶವಾಗಿರುವ ಎಲ್ಲ ಮತಗಳನ್ನು ಖಂಡಿಸಿ ಮಧ್ವಮತದ ತಿರುಳನ್ನು ಜಗತ್ತಿಗೆ ಸಾರಿದೆ ಎಂದು ಮೂರು ಅವತಾರಗಳನ್ನು ಸ್ತುತಿಸಿದ್ದಾರೆ. ಇನ್ನು ಕೊನೆಯ ನುಡಿಯಲ್ಲಿ:

**ತತ್ವೇತ್ತರೊಳಲಿ ಯೆತ್ತರದಿರುತೆ**
**ತತ್ವವಾದಮತ ಜಗತ್ತಿಗೇ ಸಾರುತೆ**
**ಸತ್ಯ–ಮಿಥ್ಯೆಗಳ ಮಹತ್ವವ ತೋರಿದ**
**ದಾತ ಜಗನ್ನಾಥವಿಠಲ ದೂತಾ** ॥ ೩ ॥

ಎಂದು ಹೇಳಿ ತತ್ವಶಾಸ್ತ್ರಗಳಲ್ಲಿ ಅತಿ ಎತ್ತರಕ್ಕೆ ಏರಿ – ನಿನ್ನದೇ ಹರಿಸರ್ವೋತಮತ್ವದ ಮತವನ್ನು ಜಗತ್ತಿನ ತುಂಬ ಸಾರಿ ಜಗತ್ತು ಸತ್ಯ–ಮಿಥ್ಯವಲ್ಲ ಎಂಬ ತತ್ತ್ವವನ್ನು ಸಾರಿ ಪ್ರಭಂಜಕನೆನಿಸಿದೆ ಎಂದು ಶ್ರೀ ಜಗನ್ನಾಥದಾಸರು ಆಂಜನೇಯನ ಮೂರಾವತಾರದ ಸಾರವನ್ನು ಹೇಳುತ್ತ ಸಾಣೆಗಿರಿ ಹನುಮಂತನ ಕೀರ್ತಿಯನ್ನು ಕೊಂಡಾಡಿರುವುದಲ್ಲದೆ, ಶ್ರೀ ಪ್ರಸನ್ನವೆಂಕಟದಾಸರಿಗೆ ಒಲಿದು ಬಂದ ಪ್ರಾಣನಾಥಾ ಎಂದು ದಾಖಲಿಸಿ ದಾಸರ ಆಧ್ಯಾತ್ಮಿಕ ಹಿರಿಮೆಯನ್ನು ಸಾರಿರುವುದು ಕಂಡು ಬರುತ್ತದೆ.

ಇಲ್ಲಿಯವರೆಗೂ ಶ್ರೀ ಪ್ರಸನ್ನವೆಂಕಟದಾಸರು ಪ್ರಾಣ ಪ್ರತಿಷ್ಠಾಪನ ಮಾಡಿದ ಎರಡು ಪ್ರಾಣದೇವರ ವಿವರಗಳು ದೊರಕಿವೆ. ಮೊದಲನೆಯದಾಗಿ ಬಾದಾಮಿ ಅಗಸ್ತ್ರಯ ತೀರ್ಥದ ದಡದಲ್ಲಿ ಪ್ರತಿಷ್ಠಾಪಿಸಿದ ಪ್ರಾಣದೇವರು ಮತ್ತು ಎರಡನೆಯದಾಗಿ ಗಜೇಂದ್ರಗಢ ಮದ್ದಿನ ಕೋಟಯ ಹತ್ತಿರ ಇರುವ ಕೆರೆಯ ದಡದಲ್ಲಿ ಪ್ರತಿಷ್ಠಾಪನೆ ಮಾಡಿದ 'ವೀರಾಂಜನೇಯ'. ಬದಾಮಿಯ ಅಗಸ್ತ್ಯ ತೀರ್ಥ ಹೊಂಡದ ಸುತ್ತಲೂ ಸಾಣೆಕಲ್ಲಿನ ಗುಡ್ಡಗಳೇ ಇರುವುದರಿಂದ, ಶ್ರೀ ಜಗನ್ನಾಥ ದಾಸರು ಬಾದಾಮಿಯಲ್ಲಿ ಪ್ರತಿಷ್ಠಾಪಿಸಿದ ಪ್ರಾಣದೇವರಿಗೆ 'ಸಾಣೆಗಿರಿ ಪ್ರಾಣನಾಥಾ' ಎಂದು ಸಂಬೋಧಿಸಿ ಕೀರ್ತನೆ ರಚಿಸಿರಬಹುದೆಂದು ಸಾಂದರ್ಭಿಕ ಪ್ರಮಾಣದಿಂದ ಊಹಿಸಬಹುದು. ಇದು ಜಾಗೃತ ಪ್ರಾಣದೇವರೆಂಬ ಪ್ರತೀತಿ ಉಂಟು.